Regd No BG 155

Sri "SATYAVADI"
— DAILY —
MYSORE 4
46 th Year

Protect the cow

— ಶ್ರೀ —

ಸತ್ಯವಾದಿ
SATYAVADI

ಸ್ಥಾಪಕರು– ಆರಮನೆ ಸಿಂಸ್ಥೇದಾರ್ ಎಂ. ವಿ. ಸುಬ್ಬರಾಯುರು

5—1962

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
"ಸತ್ಯವಾದಿ" ಪತ್ರಿಕೆಯನ್ನು
ತಪ್ಪದೇ ಓದಿ
ದಿನಪತ್ರಿಕೆ ತಿಂಗಳಿಗೆ 6 ಆಣೆ

[ಬಿಡಿ ಪ್ರತಿ 3 ಪೈ,

ಗೋಸಂರಕ್ಷಣೆ ಮಾಡಿ

ಹದಿನೆದು ದಿನಗಳಲ್ಲಿ ಅಧಿಕಾರ ವರಾವಣೆ

ಕೋಲಾರ 14 — ಪ್ರದೇಶ ಕಾಂಗ್ರೆಸಿನ ಅಧ್ಯಕ್ಷ ಶ್ರೀ ಎಸ್. ನಿಜಲಿಂಗಪ್ಪನವರಿಗೆ ಇನ್ನು 15 ದಿವಸಗಳಲ್ಲಿ ತಾವು ಅಧಿಕಾರ ವಹಿಸಬಹುದೆಂದು ಮುಖ್ಯ ಮಂತ್ರಿ ಶ್ರೀ ಎಸ್. ಆರ್. ಕಂತಿಯವರು ತಿಳಿಸಿದರು.

ಆತ್ಮಹತ್ಯೆ

35 ವರುಷದ ಲಕ್ಷ್ಮೀಬಾಯಿ ಎಂಬಾಕೆ ಗುರುವಾರ ಆತ್ಮಹತ್ಯೆ ಮಾಡಿಕೊಂಡಳೆಂದು ವರದಿಯಾಗಿದೆ ಆಕೆಯ ಗಂಡ ಶ್ರೀ ಮೋಹನ್ ಸಿಂಗರ ಪ್ರಕಾರ ಆಪರಿಗೆ ಕೆಲಸಕ್ಕೆ ಹೋಗಿ ದಿನದ ಅಗತ್ಯವನ್ನು ನಡೆಸುವದು ಕಷ್ಟವಾಗಿತ್ತು. ಆತ್ಮಹತ್ಯೆಗೆ ಅದೇ ಕಾರಣವೆಂಬಹುದು

ಚೀನಾಕ್ಕೆ ನೆಹರು ಸೂಚನೆ

ನವ ದೆಹಲಿ 14 — ವಿದೇಶ ವ್ಯವಹಾರ ಶಾಖೆಯ ಬೇಡಿಕೆಯ ಮೇಲೆ ಲೋಕಸಭೆಯಲ್ಲಿ ಚರ್ಚೆಗೆ ಪ್ರಧಾನಿ ನೆಹರು ಲೋಕಸಭೆಯಲ್ಲಿ ಹೇಳಿಕೆಯಿತ್ತು, ಮೆಕ್ಮೊಂದು ರಾಷ್ಟ್ರ ಭಾವಿಸುವ ನಕ್ಷೆಯನ್ನು 2 ರಾಷ್ಟ್ರಗಳು ವಾಪಸು ಪಡೆದು ಚೀನಾ-ಭಾರತದ ಗಡಿ ಪ್ರಶ್ನೆಯನ್ನು ಪರಿಹರಿಸಬೇಕೆಂಬ ತಮ್ಮ ಸೂಚನೆಯನ್ನು ಪ್ರಧಾನಿ ನೆಹರು ಮತ್ತೆ ಮುಂದಿಟ್ಟರು ಈ ಸೂಚನೆ ಲಡಕ್ ಪ್ರದೇಶಕ್ಕೆ ಮಾತ್ರ ಅನ್ವಯವಾಗುವದೆಂದು ನುಡಿದರು.

ಮೂಲವೇತನ ಬೇಡಿಕೆ

ಕಡೆಯ ಪಕ್ಷ ರೂ 120 ಮೂಲವೇತನ ಇಂಬೇಕೆಂದು ಬೆಂಗಳೂರಿನ ಭಾರತ ಎಲೆಕ್ಟ್ರಾನಿಕ್ ಕಾರ್ಮಿಕರು ತಿಳಿಸಿರುವರು.

ಅಜಿತ್‌ರ ಮನವಿ

ತುಮಕೂರಿನಿಂದ ಪಾರ್ಲಿಮೆಂಟಿಗೆ ಕಾಂಗ್ರೆಸಿನ ಪರವಾಗಿ ಉತ್ತರ ಪ್ರದೇಶದ ಕಾಂಗ್ರೆಸು ಅಧ್ಯಕ್ಷ ಶ್ರೀ ಅಜಿತ ಪ್ರಸಾದ ಜೈಸರು ಸ್ಪರ್ಧಿಸುವಂಥೆ ಅವರಿತ್ತಿರುವ ಹೇಳಿಕೆಯಲ್ಲಿ, ನಾನು ದಕ್ಷಿಣದ ಸೇವೆ ಮಾಡಲು ತುಂಬಾ ಆಸಕ್ತಿ ಹೊಂದಿದ್ದೇನೆ ಎಂದು ತಿಳಿಸಿರುವರು. ಇದು ರಾಷ್ಟ್ರೀಯ ಸಂಘಟನೆಗೆ ಅವಕಾಶವಾಗುವುದೆಂದು ಅವರು ತಿಳಿಸಿರುವರು.

ರಾಜಾಜಿಗೂಮಂಜೂರು

ನವ ದೆಹಲಿ 15 — ಶ್ರೀ ಸಿ. ರಾಜಗೋಪಾಲಾಚಾರಿಯವರಿಗೆ ಈಗ ಏರಾಮು ವೇತನ ಮಾತ್ರ ಬರುತ್ತಿದೆ ಅವರ ವೈದ್ಯಕೀಯ ವೆಚ್ಚ ಮತ್ತು ಕಚೇರಿಯ ವ್ಯವಸ್ಥೆಗಾಗಿ ರೂ. 12 ಸಾವಿರ ವೆಚ್ಚವನ್ನು ವರ್ಷವೊಂದಕ್ಕೆ ಕೊಡಲಾಗುವದು.

ಆಗಮನ

ಮದ್ರಾಸು 14 — ಈ ಮಾಹೆ 27 ನೆಯ ತಾ|| ರಾಷ್ಟ್ರಪತಿ ಡಾ|| ರಾಧಾಕೃಷ್ಣನ್ ಇಲ್ಲಿಗೆ ಬರುವರು. 29 ನೆಯ ತಾ|| ನವ ದೆಹಲಿಗೆ ವಾಪಸಾದರು.

152 ದಿನಗಳ ಉಪವಾಸ

ಪಾಟ್ನಾ 14 — ಜಾರಿಯಾ ಕಲ್ಲಿದ್ದಲು ಗಣಿಯ ಕಾರ್ಮಿಕ ಸಾಯುಕ್ತಳಿದ ವರ್ಷ ಡಿಸೆಂಬರ 11 ರಿಂದ ಆರಂಭಿಸಿದ್ದ ಉಪವಾಸವನ್ನು ಶನಿವಾರ ಮುಕ್ತಾಯ ಮಾಡಿದರು. ಒಟ್ಟು 152 ದಿನಗಳ ಉಪವಾಸ.

ಭಾರತಕ್ಕೆ ನೆರವು ಕೊಡುವುದರಲ್ಲಿ ಖೋತಾ

ನವ ದೆಹಲಿ 14 — ಸೆನೇಟಿನ ವಿದೇಶ ಸಂಪರ್ಕ ಸಮಿತಿ ಇತ್ತೀಚೆಗೆ ಅಂಗೀಕರಿಸಿದ ನಿರ್ಣಯದ ಬಗ್ಗೆ ಅಕಂಕ ವ್ಯಕ್ತಮಾಡಿ ಭಾರತಕ್ಕೆ ತಿಳಿಸಿದೆ. ಮುಂದಿನ ಜುಲೈ 1 ರಿಂದ ಆರಂಭವಾಗುವ ಹಣಕಾಸಿನ ವರ್ಷದಲ್ಲಿ ಭಾರತಕ್ಕೆ ಅಮೆರಿಕಾ ನೆರವನ್ನು ನೀಡಬೇಕೆಂಬುದರಲ್ಲಿ ಶೇಕಡ 25 ಖೋತಾ ಆಗಬೇಕೆಂದು ನಿರ್ಣಯವಾಗಿದೆ ವಾರಸಿಯು ಯೋಜನೆಯ ಮೊದಲನೆ ಎರಡು ವರ್ಷಗಳಲ್ಲಿ 1045 ಮಿಲಿಯ ಡಾಲರುಗಳನ್ನು ಕೊಡುವದಾಗಿ ಅಮೆರಿಕ ಸಂಗಾಮಿಯಾಗಿ ಒಪ್ಪಿತ್ತು. ಆ ಪೈಕಿ ಈಗಾಗಲೇ 5 ನೂರು ಮಿಲಿಯ ಡಾಲರುಗಳಷ್ಟು ಪಾಜೆಕ್ಟುಗಳ ಸದಾರ್ಥಗಳನ್ನು ಅಮೆರಿಕಾ ಭಾರತಕ್ಕೆ ಕೊಟ್ಟಿದೆ

\000

ಇಂಡೋನೇಷಿಯ ಅಧ್ಯಕ್ಷ ಡಾ|| ಸುಕಾರ್ನೋರವರ ವಿರುದ್ಧ ಪ್ರಯತ್ನ ನಡೆಯಿತೆಂದು ಹಾಂಗಕಾಂಗನಿಂದ ಬಂದ ವಾರ್ತೆ ತಿಳಿಸುತ್ತದೆ ಸುಕಾರ್ನೋರವರು ಜಕಾರ್ತಾದಲ್ಲಿ ನಿನ್ನೆ ಮೊರೇಕಾ ಅರಮನೆಯಲ್ಲಿ ಪಾರ್ಥನೆಗಳ ನೇತೃತ್ವ ವಹಿಸಿದ್ದಾಗ ದಾರುಲ್ ಇಸ್ಲಾಂನವನೋರ್ವನು ಗುಂಡು ಹಾರಿಸಲು ಅವರು ತಪ್ಪಿಸಿಕೊಂಡರು. ಗರೆದಿನೇಟಿನಿಂದ 5 ಜನರಿಗೆ ಗಾಯವಾಗಿವೆ.

ಗಾಮಾಂತರ ಮದ್ರಾಸಿನಲ್ಲಿ ಜನನ ಮತ್ತು ಮರಣ ಅಡ್ಡಹಾಕ್ ಖುಸೇಮು ಮಾರಿಯನ್ನು ತೆಗೆದುಕೊಳ್ಳಲು ಮದ್ರಾಸಿನ ಸರ್ಕಾರ ನಿರ್ಧರಿಸಿದೆ

ನಾಳೆಯ ಪಂಚಾಂಗ

ಅಸ್ಥಾನ ಮಹಾವಿದ್ವಾನ್ ಧರ್ಮಾಧಿಕಾರಿ
ದೈವಜ್ಞ ಶಿಖಾಮಣಿ
ಸಂಪತ್ಕುಮಾರ ಜೋಯಿಸರಿಂದ

16 ದ್ವಾದಶಿ ಹಬ್ಬ

ವಿವಿಧ ವಿಷಯಗಳು

ಬಕಿಂಗಾಮ್ ಅರಮನೆಯಲ್ಲಿ ಕಲಾಗ್ಯಾಲರಿಯಲ್ಲಿ ರಾಣಿ ಎಲಿಜಿಬೆತ್‌ರ ಸಂನಶ್ಯಾಗಳಿವೆ. ಹಂಬಾಗಳಿಂದ ನೂಡಿದ ಒಂದು ಅನೆ. ಹುಲಿಯ ದಂಜದಿಂದ ಮಾಡಿದ ಒಂದು ಪೇಪರು ತೂಕ, ಟ್ಯಾಜ್ಮಹಲಿನ ರೂಪ ಇವುಗಳು ಸೇರಿವೆ.

ಅಂಡರ್‌ಸ್ಟಿನಲ್ಲಿರುವ ರಷ್ಯ ಮೊತ್ತ ಅಪೆರಿಕ ರಾಯಭಾರಿ ಕಚೇರಿ ಮುಂದು ಬಾಂಬುಗಳು ನಿಶೇಧವಾಗಬೇಕೆಂದು ಮಂತ್ರಾಂಕ್ಕೆ ವಿಭಾರಿ ಮಹಿಳೆಯರು ಪ್ರದರ್ಶನ ಮಾಡಿದರು

ಕಲ್ಕತ್ತಾ 14 — ಇಲ್ಲಿಗೆ ಸುಮಾರು 60 ಮೈಲಿಗಳ ದೂರದಲ್ಲಿ ಕಾಕಡ್ವಿಪ್ ಪೆಟ್ರೋಲು ಮತ್ತು ಪೆಟ್ರೋಲಿಯಂ ಉತ್ಪಾದನೆಗಳ ಸಂಗ್ರಹಾಲಯದಲ್ಲಿ ಬೆಂಕಿ ಅನಾಹುತವಾಗಿ ಹನ್ನೆರಡು ಜನರಿಗೆ ಗಾಯವಾಗಿದೆ

ಬೆಂಗಳೂರು -14 — ಇಲ್ಲಿರುವ ಸಂಸ್ಥೆಯೊಂದರ ೫ ಪಾಲುಗಾರಿಕೆಗೆ ಕಾಂತ್ರಿಕ ಸಲಹೆದಾರೊಬ್ಬರಿಂದ ರೂ 1 ಲಕ್ಷ 48 ಸಾವಿರ ಕೈಬಿಡುವಂತೆ ಮಾಡಿದ ವ್ಯಕ್ತಿಗಾಗಿ ಬೆಂಗಳೂರಿನಲ್ಲಿ ಪತ್ತೆ ನಡೆಯುತ್ತಿದೆ.

ಬುಧವಾರ ಕಾಶ್ಮೀರ ಸಮಸ್ಯೆ ಚರ್ಚೆ ಆಗಬೇಕೆಂದು ಭದ್ರತಾ ಸಮಿತಿಗೆ ಪಾಕಿ ಸ್ತಾನ ಪ್ರಾರ್ಥನೆ ಮಾಡಿದೆ

ಮದ್ರಾಸು 14 — ತಾಂಬರಂನ ಸಿನಿಯರ್ ಪೈಲೆಟ್ ಇನ್‌ಸ್ಟ್ರಕ್ಟರ್ ಫ್ಲೈಟ್-ಲೆ ಟಿ ಆರ್. ರಾಘವ ವಿಮಾನ ಅಪಘಾತದಲ್ಲಿ ಮರಣಹೊಂದಿದರು ಈ ಬೆಳಿಗ್ಗೆ ಚಿಂಗಲ್‌ಪೇಟೆ ಬಳಿ 6 ಮೈಲಿ ಪೂರ್ವದಲ್ಲಿ ಈ ಘಟನೆ ನಡೆಯಿತು.

ಶ್ರೀ ದ್ವಾರಕಾ ಜಗದ್ಗುರುಗಳವರ ಅಧ್ಯಕ್ಷತೆಯಲ್ಲಿ ಶ್ರೀ ಶಂಕರ ಜಯಂತಿ ಸಮಾರಂಭ

ತೀರ್ಥಹಳ್ಳಿ ತಾಲ್ಲೂಕಿನ ಮುಳಬಾಗಿಲಿನಲ್ಲಿರುವ ಶ್ರೀ ದ್ವಾರಕಾ ಜಗದ್ಗುರು ಸಂಸ್ಥಾನ ಶ್ರೀ ಕೃಷ್ಣಾನಂದ ಮಠದಲ್ಲಿ ವೈಶಾಖ ಶುದ್ಧ ಪಂಚಮಿ ತಾ| 8-5-1962 ರಂದು ನಡೆದ ಮೂರು ದಿನಗಳ ಶಂಕರ ಜಯಂತಿ ಸಮಾರಂಭವನ್ನು ಶ್ರೀ ದ್ವಾರಕಾ ಜಗದ್ಗುರು ಶ್ರೀ ಅಭಿನವ ಸಚ್ಚಿದಾನಂದತೀರ್ಥ ಶ್ರೀ ಶ್ರೀಗಳವರ ಅಧ್ಯಕ್ಷತೆಯಲ್ಲಿ ವೈಭವದಿಂದ ಜರುಗಿತು.

ಶ್ರೀ ಶ್ರೀಗಳವರು 'ಶ್ರೀ ಶಂಕರ ಜಯಂತಿ' ಸಮಾರಂಭದ ಮುಖ್ಯಾಶಯ ಭಾಷಣದಲ್ಲಿ 'ಶ್ರೀ ಶಂಕರರು ಉಪದೇಶಿಸಿದ ತತ್ವಾನುಸರಣೆಯಿಂದಲೇ ಜಗತ್ತಿಗೆ ವಾಸ್ತವಿಕ ಶಾಂತಿ ಲಭಿಸಲು ಸಾಧ್ಯವೆಂದೂ ಭಾರತದ ಪ್ರಾಚೀನ ಸಂಸ್ಕೃತಿಯ ಪುನರುದ್ಧಾರಕರಾದ ಶ್ರೀ ಶಂಕರಾಚಾರ್ಯರಿಗೆ ಎಲ್ಲರೂ ಕೃತಜ್ಞರಾಗಬೇಕೆಂದೂ ತಿಳಿಸಿದರು.

ಮುಂದುವರಿಸುತ್ತಾ, ಬಹಳ ಅನಾದಿ ಕಾಲದಿಂದಲೂ ಅಚಂಚಲವಾಗಿರುವ ಕೈಲಾಸ ಮಾನಸರೋವರ ಯಾತ್ರೆಯು ಯಾವ ಕಾರಣದಿಂದಲೂ ನಿಲ್ಲಿಸಲ್ಪಡಬಾರದೆಂತಲೂ ತಿಳಿಸಿದರು.

ರಾಷ್ಟ್ರದ ಕೆಲವು ವಿಚಾರಶೀಲರಾದ ನಾಯಕರ ಅಭಿಪ್ರಾಯದ ವೇಳೆಗೆ ಬೌದ್ಧ ಗುರುದಲೈಲಾಮಾರವರು ಇತರ ಬೌದ್ಧಪ್ರಾಬಲ್ಯಗಳಿಂದ ಒಂದು ಆಹ್ವಾನವನ್ನು ಅಂಗೀಕರಿಸಿ ಎಷ್ಟಾ ಪ್ರಾಂತ್ಯದಲ್ಲಿ ಉದ್ಭವಿಸಿರುವ ಉದ್ವೇಗ ಪರಿಸ್ಥಿತಿಯನ್ನು ಪರಿಹರಿಸಲು ಸಹಾಯಕರಾಗಬೇಕೆಂದೂ ತಿಳಿಸಿದರು.

ದೇವಸ್ಥಾನಗಳಲ್ಲಿ ಪೂಜಾ ವಿಧಾನವನ್ನು ಕನ್ನಡ ಭಾಷೆಯಲ್ಲಿ ಮಾಡಬೇಕೆಂದು ಮದರಾಸು ಸರ್ಕಾರದ ಆಜ್ಞೆಯನ್ನು ಉದ್ದೇಶಿಸಿ ಶ್ರೀಶ್ರೀಗಳವರು ಈ ಕಾನೂನು ಅತಿ ಪ್ರಾಚೀನ ಪರಂಪರೆಯ ಮೇಲೆ ತೀವ್ರ ಪರಿಣಾಮ ಬೀರುವುದೆಂತಲೂ, ಇಂತಹ ನಿರ್ಬಂಧಗಳ ರಾಜ್ಯಾಂಗದತ್ವವಾದ ಮೂಲಭೂತ ಧಾರ್ಮಿಕ ಹಕ್ಕಿನ ಉಲ್ಲಂಘನೆಯೆಂದೂ, ಕೇಂದ್ರ ಸರಕಾರವು ಉದ್ದೇಶಿಸಿರುವ 'ಸಂಸ್ಕೃತ' ಭಾಷೆಯ ಪುನರುಜ್ಜೀವನದ ಕಾರ್ಯಕಲಾಪಗಳ ಮೇಲೆ ಮತ್ತು ಭಾರತೀಯ ಸಂಸ್ಕೃತಿಯ ಪರಂಪರೆಯ ಮೇಲೆ ಬಹಳ ಆಘಾತವನ್ನು ಉಂಟುಮಾಡುವುದರಿಂದಲೂ ಮದರಾಸು ಸರ್ಕಾರವು ಈ ಆಜ್ಞೆಯನ್ನು ಹಿಂದೆ ತೆಗೆದುಕೊಳ್ಳಬೇಕೆಂದೂ ಆ ಮೂಲಕ ಭಾರತದ ಭಾವಾತ್ಯಕ ರಾಷ್ಟ್ರೀಯ ಐಕ್ಯತೆಗೆ ಸಹಾಯಕರಾಗಬೇಕೆಂದೂ ತಿಳಿಸಿದರು.

SHAKTI SUDHA

A Superb Tonic

Help The 'Gorakshana'

ಗೋರಕ್ಷಣ ಪ್ರಾಣಿದಯಾ ಕಾರ್ಯಗಳು ಹೆಚ್ಚೆಚ್ಚಾಗಿ ನಡೆಯಲಿ
"ಗೋರಕ್ಷಣ" ಪತ್ರಿಕೆಗೆ ಬೆಂಬಲಿಗರಾಗಿರಿ

ಗೋರಕ್ಷಣೆ, ಪ್ರಾಣಿದಯೆ, ಪಶುವೈದ್ಯ, ಶಾಕಾಹಾರ ವಿಚಾರಗಳಿಂದ ಕೂಡಿದ ಏಕೈಕ ಕನ್ನಡ ಪತ್ರಿಕೆ.

ವಿಳಾಸ – ಗೋರಕ್ಷಣ ಆಫೀಸ್, ಚಾಮರಾಜಪುರಂ, ಮೈಸೂರು

ವುಡ್‌ಲ್ಯಾಂಡ್ಸ್ ಆನಂದಭವನ 14 ನೇ ವಾರ

ಜಂಗ್ಲಿ (ಹಿಂದಿ) Junglee

ನಟವರ್ಗ— ಶಮ್ಮಿ ಕಪೂರ್, ಸೈರಾ ಬಾನು, ಲಲಿತಾ ಪವಾರ್, ಹೆಲೆನ್
ಸಂಗೀತ— ಶಂಕರ್-ಜೈಕಿಶನ್ [ದಿನವಹಿ 3 ಪ್ರದರ್ಶನಗಳು]

ಆಪೆರಾ— ಯಶಸ್ವಿ 4 ನೇ ವಾರ

ಸಂಪೂರ್ಣ ರಾಮಾಯಣ
- ಕನ್ನಡ -
[ಪೂರ್ಣ ವರ್ಣಾಂಚಿತ ಚಿತ್ರ] [ದಿನವಹಿ 3 ಆಟಗಳು]

For Quality Printing
L. N. Press
Sivarampet, Mysore

ಎಲ್ಲ ವಿಧದ ಆಯುರ್ವೇದ ಔಷಧಗಳಿಗೆ
ಅ ಶೋ ಕಾ ಫಾರ್ಮಸಿ
ಲ್ಯಾನ್ಸ್‌ಡೌನ್ ಬಜಾರ್ ಮೈಸೂರು

ಅವೇರಿಕ— ಏಬ್ರಹಂ ಲಿಂಕನ್ನರ ಸಂಬಂಧಿಸಿದ ಚಿತ್ರಗಳು

Edited, Printed & Published by the Proprietor, Dharma Prachara Nirata M. S. Krishna Rao, at the Satyavadi Press, Chamarajapuram, Mysore 4.